ಈ) ಎಷ್ಟು ಸಮಯದೊಳಗಾಗಿ ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ತರಲಾಗುತ್ತಿದೆ.
ಉದ್ಭವಿಸುವುದಿಲ್ಲ.
ಕ್ರಮ ಕೈಗೊಳ್ಳಲಾಗುವುದು.
ಇನ್ನೂ ಸ್ವಲ್ಪ ಸಮಯ ಬೇಕಾಗುತ್ತದೆ.

ವಿಷಯ:- ಸಾರ್ವಜನಿಕ ಕುಂದುಕೊರತೆಗಳ ವಿಭಾಗದಿಂದ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೯:- (೫೦೦)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಚಿವಾಲಯದಲ್ಲಿ ಸಾರ್ವಜನಿಕ ಕುಂದುಕೊರತೆಗಳ ವಿಭಾಗವು ಪ್ರಾರಂಭವಾದಗಿನಿಂದ ಇಲ್ಲಿಯವರೆಗೆ ಎಷ್ಟು ಮನವಿಗಳನ್ನು ಸ್ವೀಕರಿಸಲಾಗಿದೆ.
ಆ) ಆ ಮನವಿಗಳ ಪೈಕಿ ಎಷ್ಟನ್ನು ಇತ್ಯರ್ಥಗೊಳಿಸಿ ಪರಿಹಾರ ಕಲ್ಪಿಸಲಾಗಿದೆ. (ಪರಿಹಾರ ಪಡೆದವರ ಪೂರ್ಣ ಮಾಹಿತಿ ನೀಡುವುದು)
ಇ) ಆ ಮನವಿಗಳ ಪೈಕಿ ಎಷ್ಟು ಇತ್ಯರ್ಥವಾಗದೆ ಹಾಗೆ ಉಳಿದಿವೆ ಹಾಗೂ ಅದಕ್ಕೆ ಕಾರಣಗಳೇನು?

ಶ್ರೀ ಪೆರಿಕಲ್ ಎಂ. ಮಲಪ್ಪ.
(ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರು ಸಚಿವರು)

ಸಾರ್ವಜನಿಕ ಕುಂದುಕೊರತೆ ವಿಭಾಗವು ದಿನಾಂಕ ೧-೭-೮೩ರಿಂದ ಅಸ್ತಿತ್ವಕ್ಕೆ ಬಂದಿದ್ದು, ನಿಯಾಮಾನುಸಾರ ಈ ವಿಭಾಗದಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಪ್ರತಿ ೧೩ ತಿಂಗಳಿಗೊಂದು ಬಾರಿ ಎಲ್ಲಾ ಕಡತಗಳನ್ನು ವಿಲೇ ಮಾಡಲಾಗುತ್ತಿದೆ. ಅಲ್ಲದೆ ಈ ವಿಭಾಗವನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ ೪೫ ಎಎಆರ್ ೯೦(೧) ದಿನಾಂಕ ೨೧-೫-೯೦ರಲ್ಲಿ ರದ್ದು ಮಾಡಿ ದಕ್ಷತೆ ಪರಿಶೋಧನೆ ಮತ್ತು ಜಾಗೃತ ವಿಭಾಗದಲ್ಲಿ ವಿಲೀನಗೊಳಿಸಿದ್ದು ತದನಂತರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ ೧೫ ಎಸ್‌ಇಎಂ ೯೨ ದಿನಾಂಕ ೩೦-೭-೯೨ರಲ್ಲಿ ಪುನರ್ ಚಾಲನೆಗೊಳಿಸಿದೆ. ಜನವರಿ ೯೨ ರಿಂದ ಡಿಸೆಂಬರ್ ೯೨ರವರೆಗೆ ೪೯೪೪ ಅರ್ಜಿಗಳನ್ನು ಸ್ವೀಕರಿಸಿದೆ.

ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ೪೧೬೫೫ (ಜನವರಿ ೯೨ ರಿಂದ ಡಿಸೆಂಬರ್ ೯೨ರವರೆಗೆ)

ಡಿಸೆಂಬರ್ ೧೯೯೨ರ ಅಂತ್ಯಕ್ಕೆ ೧೬೨೨ ಪ್ರಕರಣಗಳು ಬಾಕಿ ಇರುತ್ತವೆ. ಈ ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಗಳಿಂದ ಉತ್ತರ ಬರಬೇಕಾಗಿರುತ್ತದೆ.
ಇಲಾಖೆಗಳಲ್ಲಿ ಪ್ರಕರಣಗಳು ಇತ್ಯರ್ಥವಾಗದೆ ಉಳಿದಿರುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಕೆಲವು ಈ ಕೆಳಕಂಡಂತೆ ಪಟ್ಟಿ ಮಾಡಿದೆ.

೧) ಕೆಲವು ಪ್ರಕರಣಗಳಲ್ಲಿ ಇಲಾಖೆಗಳು ಕೆಳಹಂತದ ಮಾಹಿತಿಗಳನ್ನು ಕ್ರೋಢೀಕರಿಸುವಲ್ಲಿ ವಿಳಂಬವಾಗುತ್ತದೆ.

೨) ಕೆಲವು ಪ್ರಕರಣಗಳಲ್ಲಿ ಅಂದರೆ ವಿಧವಾ ವೇತನ, ವೃದ್ಧಾಪ್ಯ ವೇತನ ಮುಂತಾದುವುಗಳಲ್ಲಿ ಅರ್ಜಿದಾರರು ಪೂರ್ಣ ಮಾಹಿತಿಯನ್ನು ಸಲ್ಲಿಸದೆ ಇರುವುದು.

೩) ಭೂಸ್ವಾಧೀನ, ಜಮೀನು ಮಂಜೂರಾತಿ ಮತ್ತಿತರೆ ಪ್ರಕರಣಗಳಲ್ಲಿ ಅದರದೇ ಆದ ಸಮಯವನ್ನು ತೆಗೆದುಕೊಳ್ಳುವುದು. ಈ ಕಾರಣಗಳಿಂದ ಇಲಾಖೆಗಳು ಸಾರ್ವಜನಿಕ ದೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರ ಕಳುಹಿಸಲು ವಿಳಂಬವಾಗುತ್ತದೆ.

ವಿಷಯ:- ಮಂತ್ರಿಗಳ ನೇಮಕದಲ್ಲಿ ಅನುಸರಿಸಲಾದ ವಿಧಾನಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೨:- (೫೦೪)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂತ್ರಿಗಳನ್ನು ನೇಮಕ ಮಾಡುವಾಗ ಅನುಸರಿಸುವ ವಿಧಾನಗಳೇನು?
ಆ) ಮಂತ್ರಿಗಳನ್ನು ನೇಮಕ ಮಾಡುವಾಗ ಆಡಳಿತ ಸುಧಾರಣಾ ಸಮಿತಿ ಕೊಟ್ಟಿರುವ ವರದಿಯನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದೇ?
ಇ) ಮಂತ್ರಿಗಳಿಗೆ ವಿಧಿಸಿರುವ ನೀತಿ ಸಂಹಿತೆಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಮಂತ್ರಿಗಳನ್ನು ನೇಮಕಮಾಡುವಾಗ ಅಂತಹ ವ್ಯಕ್ತಿಗಳ ರಾಜಕೀಯ ವ್ಯಕ್ತಿತ್ವ ವೈಯಕ್ತಿಕ ಪ್ರಾಮಾಣಿಕತೆ ಬೌದ್ಧಿಕ ಸಾಮರ್ಥ್ಯ ಹಾಗೂ ಕಾರ್ಯ ಭಾರವನ್ನು ಹೊರುವ ಸಾಮರ್ಥ್ಯ ಇವುಗಳ ಬಗ್ಗೆ ವಿಶೇಷಗಮನವನ್ನು ನೀಡಲಾಗುವುದು.

ಆಡಳಿತ ಸುಧಾರಣೆ ಸಮಿತಿಯ ವರದಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಗಮನಕ್ಕೆ ತೆಗೆದುಕೊಳ್ಳಲಾಗುವುದು.

ದಿನಾಂಕ ೨೫-೧೧-೧೯೯೨ರ ಸುತ್ತೋಲೆ ಸಂಖ್ಯೆ ಸಿಆಸುಇ ೭೩ ಶಿಸನೆ ೯೨ರಲ್ಲಿ ಸಚಿವರಿಗೆ ನೀತಿ ಸಂಹಿತೆಯನ್ನು ವಿಧಿಸಲಾಗಿದೆ. ಅದರ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಸರ್ಕಾರಿ ಸುತ್ತೋಲೆ ಸಂಖ್ಯೆ : ಡಿ.ಪಿ.ಎ.ಆರ್.೭೩ ಜಿಎಎಂ ೯೨.. ದಿನಾಂಕ: ೨೫ನೇ ನವೆಂಬರ್ ೧೯೯೨.

ವಿಷಯ:- ಸಚಿವರಿಗೆ ನೀತಿ ಸಂಹಿತೆ

ಸರ್ಕಾರದ ಪ್ರಕಾರ್ಯಗಳನ್ನು ವ್ಯವಸ್ಥಿತವಾಗಿ ನಿಯಂತ್ರಣಗೊಳಿಸುವ ಉದ್ದೇಶಕ್ಕಾಗಿ ಹಾಗೂ ಅದರ ಘನತೆ ಮತ್ತು ಗೌರವವನ್ನು ಕಾಪಾಡುವ ದೃಷ್ಟಿಯಿಂದ, ಸರ್ಕಾರವು ರಾಜ್ಯ ಸರ್ಕಾರದ ಮಂತ್ರಿಮಂಡಲದ ಸದಸ್ಯರು ಒಂದು ನೀತಿ ಸಂಹಿತೆಗೆ ತಮ್ಮನ್ನು ಒಳಪಡಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಿದೆ.ತದನುಸಾರವಾಗಿ, ಎಲ್ಲಾ ಸಚಿವರ ಮಾರ್ಗದರ್ಶನಕ್ಕಾಗಿ ಮತ್ತು ಅವರಿಂದ ಪರಿಪಾಲನೆಗೊಳ್ಳಲು ಈ ಕೂಡಲೇ ಜಾರಿಗೆ ಬರುವಂತೆ, ಈ ಮುಂದಿನ ನೀತಿ ಸಂಹಿತೆಯನ್ನು ಈ ಮೂಲಕ ವಿಧಿಸಲಾಗಿದೆ:-